ಬಸ್ಸಿನ ಹಿಂದೆ ಮರೆಯಾಗಿ ನಿಂತಾಗ ಮತ್ತೆ ನೆನಪಾಗಿತ್ತು – ಹೋದ ವರ್ಷದ ಒಂದು ಘಟನೆ.

ಒಂದು ರಾತ್ರಿ ಹನ್ನೊಂದರ ಸುಮಾರಿಗೆ ಟ್ಯೂಬಲಾಯಿಟ ಆರಿಸಿ ಝಿರೋ ಬಲ್ಬದ ಮಂದ ಬೆಳಕಿನಲ್ಲಿ  ಹೆಂಡತಿಯ ಬತ್ತಲೆ ಮೈಯನ್ನು ಮೃದುವಾಗಿ ಸವರುವ ಹೊತ್ತಿಗೇ ಧಡಧಡ ಬಾಗಿಲು ಬಡ್ಡಿದ ಸಪ್ಪಳ ಕೇಳಿ ಗಡಿಬಿಡಿಯಲ್ಲಿ ಅರಿವೆ ಹಾಕಿಕೊಂಡು ಬಾಗಿಲು ತೆರೆದು ನೋಡಿದರೆ ವಸಂತ ಧುತ್ತೆಂದು ಎದುರಿಗೆ ನಿಂತಿದ್ದ. 'ಬಾಗಲಾ ತಗೀಲಿಕ್ಕೆ ಎಷ್ಟು ಹೊತ್ತೋ ಮಾಹಾರಾಯ ' ಎಂದು (ಬಹುಶಃ) ಸಣ್ಣಗೆ ನಕ್ಕಿದ್ದ. ಸ್ವಲ್ಪ ಹೊತ್ತಿನ ಮೇಲೆ ಹೆಂಡತಿಯೂ ಹೊರಗೆ ಬಂದು ಔಪಚಾರಿಕವಾಗಿ ಒಂದೆರಡು ಮಾತನಾಡಿದರೂ ಅವಳ ಮುಖದ ಮೇಲಿನ ಗಂಟು ಬಿಚ್ಚಿರಲಿಲ್ಲ. ಹೆಂಡತಿ ಸುಮ್ಮನೇ ನಿಂತಿದ್ದನ್ನು ನೋಡಿ ರತ್ನಾಕರನೇ 'ನಡೀ ಊಟಕ್ಕ' ಅಂದಾಗ 'ಇಲ್ಲೇ ಹತ್ತೂವರೆಗೆ ಇಳಿದ ಮ್ಯಾಲೆ ಭಾಳ ಹಸಿವಾಗಿತ್ತು ಅಂತ ಪಾವ ಭಾಜಿ ತಿಂದು ಬಂದೆ' ಅಂದಾಗ ಅದು ಸುಳ್ಳು ಅಂತ ಗೊತ್ತಿದ್ದರೂ ಕೂಡ ತಾನ ಜೋರು–ಜುಲುಮೆ ಮಾಡದೇ ಇದ್ದದ್ದು ಹೆಂಡತಿಯ ಸಲುವಾಗಿಯೇ ಅಥವಾ ತಾನೇ ಆ ರೀತಿ ಆಗಿದ್ದನೆಯೋ ಎಂದು ಚಿಂತಿಸಿದ.

ವಸಂತ ನಿರ್ವಿಕಾರನಾಗಿ ಸೋಫಾದ ಮೇಲೆ ಕುಳಿತು ಚಾರ್‌ಮಿನಾರ್ ಸಿಗರೇಟು ಹಚ್ಚಿ 'ವೈನಿಗೆ ತ್ರಾಸ ಆಗೂ ಹಾಂಗಿದ್ದಿಲ್ಲಿಂದ್ರ ಒಂದು ಕಪ್ ಚಹಾ ಮಾಡ್ಲಿಕ್ಕೆ ಹೇಳು. ಇಲ್ಲಾಂದ್ರೂ ಅವರು ದಣಿದಿರಬೇಕು ನಡೀ ನಾವss ಚಹಾ ಮಾಡೋಣಾಂತ' ಅಂದಾಗ ರತ್ನಾಕರ 'ಛೆ! ಛೆ!! ಆಕಿಗೆ ನನ್ನ ಗೆಳ್ಯಾರಂದ್ರ ಭಾಳ ಖುಷಿ, ಏ ಇಲ್ಲಿ ನೋಡs ಬರೇ ಒಂದು ಕಪ್ ಚಹಾ ಮಾಡು. ಅಂವಾ ಊಟಾ ಮಾಡೇ ಬಂದಾನಂತ' ಎಂದು ಹೇಳಿದಾಗ ಯಾಕೆ ಮತ್ತೊಮ್ಮೆ ವಸಂತ ನಕ್ಕಂತೆ ಅನಿಸಿತ್ತಲ್ಲ!...

ಒಟ್ನೂ ವಸಂತ ಹೇಳಿದ್ದರ ತಿರುಳು ಇಷ್ಟಾಗಿತ್ತು. ಯಾಕೋ ಅವನಿಗೆ ರತ್ನಾಕರನನ್ನು ನೋಡಬೇಕು ಅನ್ನಿಸಿತಂತೆ. ಅನಿಸಿದ್ದೇ ತಡ ಹೊರಟು ಬಂದೇ ಬಿಟ್ಟನಂತೆ... ಆದರೂ ಬರುವಾಗ ಇವನಿಗಾಗಿ ಒಂದೆರಡು ಇಂಗ್ಲಿಷ್ ಪುಸ್ತಕ, ಕಾರ್ನಾಡರ 'ತುಘಲಕ'. ಕಾರಂತರ 'ಅಳಿದ ಮೇಲೆ' ತಂದಿದ್ದ.

ರಾತ್ರಿ ಮೂರರವರೆಗೆ ಇಬ್ಬರಲ್ಲಿಯೂ ಮಾತುಕತೆ ನಡೆದಿತ್ತು. ವಸಂತನ ಜೊತೆಗೆ ಮಾತನಾಡುತ್ತ ರತ್ನಾಕರನೂ ಬಾಲ್ಯದ ಸುಖದುಃಖಗಳ ಬೆಚ್ಚಗಿನ ಅನುಭವ ವಿಶ್ವದಲ್ಲಿ ಘನೀಭೂತನಾಗಿದ್ದ. ಇಂಥ ಕರಗುವ ಹೊತ್ತಿನಲ್ಲೇ ಬಹುಶಃ ಇನ್ನೊಬ್ಬರ ಬಗ್ಗೆ ಕಳಕಳಿ ಹುಟ್ಟುವ ಕಾರಣ (ಇಂಥ ಕರಗುವ ಹೊತ್ತು ಕೂಡ ಈಗ ಬದುಕಿನಲ್ಲಿ ಅಪವಾದ) ರತ್ನಾಕರನೂ ವಸಂತನ ಬಗ್ಗೆ ವಿಚಾರಿಸಿದ್ದ. ಅವನ ಬದುಕಿನ ಈ ಏರುಪೇರುಗಳ ಬಗ್ಗೆ ತನಗೆ ಎಷ್ಟು ಚಿಂತೆ, ದುಃಖ ಎಂದು ಮತ್ತೆ ಮತ್ತೆ ಒತ್ತಿ ಒತ್ತಿ ಹೇಳಿದ್ದ. ಆದರೆ ರತ್ನಾಕರನ ಮಾತುಗಳಿಗೆ ವಸಂತ ಕರಗದೇ (ಅಥವಾ ಯಾವಾಗಲೂ ಕರಗಿದವನೇ ಆಗಿರುವುದರಿಂದ ನಮಗೆ ಹಾಗೆ ಅನ್ನಿಸುವದಿಲ್ಲವೋ ಏನೋ ಎಂಬ ವಿಷಯ ರತ್ನಾಕರನ ಮನಸ್ಸಿನಲ್ಲಿ ಫಕ್ಕೆಂದು ಮಿಂಚಿನಂತೆ ಹೊಳೆದು ಹೋಗಿತ್ತು) ತನ್ನ ಬಗ್ಗೆ ಹೇಳಲೋ ಬೇಡವೋ ಅನ್ನು (ಅಥವಾ ಹೇಳಿದರೂ ಅಷ್ಟೇ, ಬಿಟ್ಟರೂ ಅಷ್ಟೇ ಎಂಬ ಸತ್ಯ ಮನಗಂಡಿದ್ದನೋ?)ವಂತೆ ಮಾಹಿತಿ ಪೂರೈಸಿದ್ದ.

ಪುಸ್ತಕದ ಅಂಗಡಿ ಅಷ್ಟೇನು ಚೆನ್ನಾಗಿ ನಡೆಯುತ್ತಿರಲಿಲ್ಲ. ಪಠ್ಯ ಪುಸ್ತಕ, ಗೈಡು, ಅಥವಾ ವಯಸ್ಕರಿಗಾಗಿ ಇರುವ (ಆದರೆ ಎಲ್ಲರಿಗೂ ಸಿಗುವ) ಪುಸ್ತಕಗಳ ಜಗತ್ತಿನಲ್ಲಿ ಕವಿತೆ, ನಾಟಕ, ವಿಮರ್ಶೆಗಳ ಪುಸ್ತಕ ಯಾರಿಗೆ ಬೇಕು? ಎಲ್ಲರ ಮನೆಯಲ್ಲೂ ಟಿ.ವಿ. ಬೇರೆ. ಟಾಯಿಮ್ ಪಾಸ್